vishwavani.news

ಕಾಂಗ್ರೆಸ್‌ಗೆ ಸಿಎಂ ಯಡಿಯೂರಪ್ಪ ಚಾಲೆಂಜ್ | ಸಿಎಂ ಬದಲಾವಣೆ ಹೇಳಿಕೆಗೆ ಗರಂ

# ನಿಮ್ಮಗೆ ಪ್ರತಿಪಕ್ಷ ಸ್ಥಾನ ಕಾಯಂ

6/2/21

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಬೆಂಬಲ ಇರುವವರೆಗೆ ನನ್ನ ವಿರುದ್ಧ ನೂರು ಆರೋಪ ಕೇಳಿ ಬಂದರೂ ಎದುರಿಸಿ ಗೆದ್ದು ಬರುತ್ತೇನೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ವಿಧಾನಸಭೆಯಲ್ಲಿ ಅಬ್ಬರಿಸಿದ್ದಾರೆ.

ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಸಂದರ್ಭ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಮಾತನ್ನು ನೆನಪಿಸಿ ಕೊಂಡ ಅವರು, ಡಿನೋಟಿಫಿಕೇಷನ್ ಆರೋಪದ ಹಿನ್ನೆಲೆಯಲ್ಲಿ ನಾನು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಡಬೇಕು ಎಂದಿದ್ದಾರೆ. ಆದರೆ ಅದರ ಅಗತ್ಯವಿಲ್ಲ ಎಂದರು. ಇವತ್ತು ಯಾರ ಮೇಲೆ ಆರೋಪಗಳಿಲ್ಲ. ಕಾಂಗ್ರೆಸ್ ರಾಷ್ಟ್ರೀಯ ನಾಯಕರಿಂದ ಹಿಡಿದು ಬಹುತೇಕರ ಮೇಲೆ ಆರೋಪಗಳಿವೆ. ಹಲವರು ಜಾಮೀನಿನ ಮೇಲೆ ಹೊರಗಿದ್ದಾರೆ. ಆ ನಾಯಕರು ಯಾರು ಎಂದು ನಾನು ಪ್ರತ್ಯೇಕ ಹೇಳಬೇಕಿಲ್ಲ, ಅವರು ಈ ಮನೆಯ ಸದಸ್ಯರಲ್ಲದೆ ಇರುವುದರಿಂದ ನಾನವರ ಹೆಸರು ಹೇಳಲಾರೆ ಎಂದರು.

ಹಾದಿ ಬೀದಿಯಲ್ಲಿ ಹೋಗುವವರೂ ಆರ್‌ಟಿಐ ಅಡಿ ಮಾಹಿತಿ ಪಡೆದು ಸಿಎಂ, ಸಚಿವರ ಮೇಲೆ ಕೇಸು ಹಾಕುತ್ತಿದ್ದಾರೆ. ಹಾಗಂತ ಕೇಸು ಬಿದ್ದ ಕೂಡಲೆ ಅವರೆಲ್ಲ ತಪ್ಪಿತಸ್ಥರಲ್ಲ. ನನ್ನ ವಿರುದ್ಧ ಇಂತಹ ಕೇಸು ಬಿದ್ದಿದೆ. ಆದರೆ ಪ್ರಧಾನಿ ಮೋದಿ, ಅಮಿತ್ ಶಾ ಬೆಂಬಲ ಇರುತ್ತದೋ? ಅಲ್ಲಿಯವರೆಗೆ ಇಂತಹ ನೂರು ಆರೋಪಗಳು ಬರಲಿ. ಗೆದ್ದು ಬರುತ್ತೇನೆ. ಸಿದ್ದರಾಮಯ್ಯ ಅಧಿಕಾರದಲ್ಲಿದ್ದಾಗ ತಮ್ಮ ಮೇಲೆ ಎಂತೆಂತಹ ಆರೋಪಗಳು ಕೇಳಿ ಬಂದಿದ್ದವು ಎಂಬುದನ್ನು ನೆನಪಿಸಿಕೊಳ್ಳಬೇಕು ಎಂದು ಕುಟುಕಿದರು.

ಕಳೆದ ವರ್ಷ ಕರೋನಾ ಸಮಸ್ಯೆ ಎದುರಾಯಿತು. ರಾಜ್ಯ ಲಾಕ್‌ಡೌನ್ ಆಯಿತು. ಆದಾಯ ಕುಸಿಯಿತು. ಜನ ಕಷ್ಟಕ್ಕೆ ಸಿಲುಕಿಕೊಂಡರು. ಇಂತಹ ಪರಿಸ್ಥಿತಿಯಲ್ಲಿ ಎರಡು ಸಾವಿರ ಕೋಟಿ ರು.ಗೂ ಅಧಿಕ ಹಣವನ್ನು ಕರೋನಾ ಸಂಕಷ್ಟಕ್ಕೆ ಬಳಸಿದೆವು. ವಸತಿ, ಲೋಕೋಪಯೋಗಿ, ಕೈಗಾರಿಕೆ, ಸಮಾಜ ಕಲ್ಯಾಣ, ಪ್ರವಾಸೋದ್ಯಮ ಸೇರಿ ಸರಕಾರದ ಬಹುತೇಕ ಇಲಾಖೆಗಳಲ್ಲಿ ಪರಿಣಾಮಕಾರಿ ಸಾಧನೆ ಮಾಡಿದೆವು. ಇಂಧನ ಕ್ಷೇತ್ರದಲ್ಲಿ ನಮ್ಮ ಸಾಧನೆ ಗಣನೀಯ. ಹೆಚ್ಚುವರಿ ವಿದ್ಯುತ್ ಅನ್ನು ಬೇರೆ ರಾಜ್ಯಗಳಿಗೆ ಮಾರಾಟ ಮಾಡುವ ಸ್ಥಿತಿಯಲ್ಲಿದ್ದೇವೆ. ನಮಗಿರುವ ಸಾಮರ್ಥ್ಯದಷ್ಟು ವಿದ್ಯುತ್ ಉತ್ಪಾದನೆ ಮಾಡದೇ ಇರಬಹುದು. ಆದರೆ ಉತ್ಪಾದನೆ ಮಾಡಿದ ವಿದ್ಯುತ್ ನಲ್ಲೇ ಹೆಚ್ಚುವರಿ ವಿದ್ಯುತ್ ಮಾರಾಟ ಮಾಡುವ ಸ್ಥಿತಿಯಲ್ಲಿದ್ದೇವೆ ಎಂದು ತಿಳಿಸಿದರು.

**ಎಸ್‌ಸಿ/ಎಸ್‌ಟಿ ಜಟಾಪಟಿ:** ಬಜೆಟ್‌ನಲ್ಲಿ ಏನು ಭರವಸೆ ನೀಡಿದ್ದಿರೋ, ಅವುಗಳಲ್ಲಿ ಬಹುತೇಕ ಭರವಸೆ ಈಡೇರಿಲ್ಲ. ರೈತರ ಮಕ್ಕಳಿಗೆ ಓದಲು ಹಣ ಕೊಡುತ್ತೇವೆ ಎಂದಿದ್ದಿರಿ ಕೊಟ್ಟಿರಾ? ರೈತರನ್ನು ಅಧ್ಯಯನಕ್ಕಾಗಿ ಇಸ್ರೇಲ್, ಚೀನಾಗೆ ಕಳಿಸುವುದಾಗಿ ಹೇಳಿದ್ದಿರಿ.ಕಳಿಸಿದಿರಾ? ಪರಿಶಿಷ್ಟ ಜಾತಿ, ಪಂಗಡಗಳಿಗೆ ನಿಗದಿ ಮಾಡಿದಷ್ಟು ಹಣ ವೆಚ್ಚ ಮಾಡಿದ್ದೀರಾ? ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು. ಈ ಹಂತದಲ್ಲಿ ಡಿಸಿಎಂ ಗೋವಿಂದ ಕಾರಜೋಳ ಎದ್ದು ನಿಂತು, ಈ ಹಿಂದಿನ ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ ಅವರ ಸರಕಾರ ಮಾಡದೇ ಇರುವಷ್ಟು ಕೆಲಸವನ್ನು ನಮ್ಮ ಸರಕಾರ ಮಾಡಿದೆ. ಆದರೆ, ಅವರಿಗೆ ಮೀಸಲಿಟ್ಟ ಹಣದ ಪೈಕಿ ಶೇ. 42 ರಷ್ಟು ಹಣ ಮಾತ್ರ ಖರ್ಚು ಮಾಡಿದ್ದೀರಿ ಎಂದು ವಿರೋಧ ಪಕ್ಷಗಳು ಆರೋಪಿಸಿದಾಗ ತಿರುಗೇಟು ನೀಡಿದ ಗೋವಿಂದ ಕಾರಜೋಳ, ನಿಮ್ಮ ಅವಧಿಯಲ್ಲಿ ನಿಗದಿತ ಹಣ ಖರ್ಚು ಮಾಡಿದ್ದಿರಾ? ಎಂದರು. ನಾವು ಪರಿಶಿಷ್ಟರಿಗಾಗಿ ನಾಲ್ಕು ಸಾವಿರ ಎಕರೆ ಭೂಮಿ ಖರೀದಿಸಿ ಕೊಟ್ಟಿದ್ದೇವೆ. ಅವರಿಗಾಗಿ ವಿವಿಧ ಕಾರ್ಯಕ್ರಮ ಗಳನ್ನು ಜಾರಿಗೊಳಿಸಿದ್ದೇವೆ. ನಿಮ್ಮ ಕಾಲಕ್ಕಿಂತ ಹೆಚ್ಚು ಕೆಲಸ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು.

**150 ಸ್ಥಾನ ಗೆಲ್ಲುವ ಗುರಿ :** ಮುಂದಿನ ಉಪಚುನಾವಣೆಗಳಲ್ಲಿ ನಿಮ್ಮನ್ನು ಸೋಲಿಸುತ್ತೇವೆ. ಸಾರ್ವತ್ರಿಕ ಚುನಾವಣೆಯಲ್ಲಿ 150 ಕ್ಕೂ ಹೆಚ್ಚು ಸ್ಥಾನ ಗಳಿಸಿ ನಿಮ್ಮನ್ನು (ಕಾಂಗ್ರೆಸ್) ಶಾಶ್ವತ ವಿರೋಧ ಪಕ್ಷವಾಗಿ ಕೂರಿಸುತ್ತೇನೆ ಎಂದು ಯಡಿಯೂರಪ್ಪ ಗುಡುಗಿದರು. ಪದೇಪದೆ ಯಡಿಯೂರಪ್ಪ ಅವರು ಅಧಿಕಾರ ಕಳೆದು ಕೊಳ್ಳುತ್ತಾರೆ ಎಂದು ಹೇಳುತ್ತೀರಿ, ನಿದ್ದೆಯಲ್ಲಿಯೂ ನನ್ನದೇ ಧ್ಯಾನ ಮಾಡುತ್ತೀರಿ ಎಂದರು.



ವಿಧಾನಸಭೆಯಲ್ಲಿ ಮಾತನಾಡುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪ.

## ಆಪರೇಷನ್ ಜನಕ ಯಾರು?

ಆಪರೇಷನ್ ಕಮಲದ ಜನಕ ಯಡಿಯೂರಪ್ಪ ಎಂಬ ಸಿದ್ದರಾಮಯ್ಯ ಅವರ ಟೀಕೆಗೆ ಉತ್ತರಿಸಿದ ಯಡಿಯೂರಪ್ಪ ಅವರು, ನೀವು ಜೆಡಿಎಸ್‌ನಿಂದ ಹೊರಹೋಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಉಪಚುನಾವಣೆ ಎದುರಿಸಿದಿರಿ. ಅದನ್ನು ಆಪರೇಷನ್ ಎಂದು ಕರೆಯಬೇಕೋ, ಹೇಗೆ ತಿಳಿಸಿ. ನಂತರದ ದಿನಗಳಲ್ಲಿ ಅದೆಷ್ಟು ಆಪರೇಷನ್ ಮಾಡಿ ಬೇರೆ ಪಕ್ಷದವರನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಂಡಿರಿ? ಎಂದು ಪ್ರಶ್ನಿಸಿದರು. ಮೋದಿ, ಅಮಿತ್ ಶಾ ಅವರ ಆಶೀರ್ವಾದ ಇರುವವರೆಗೆ ಇಂತಹ ನೂರು ಆರೋಪ ಬಂದರೂ ಎದುರಿಸಿ ಗೆದ್ದು ಬರುತ್ತೇನೆ. ಈಗಲೂ ಹೇಳುತ್ತೇನೆ. ನೀವೇನೇ ಆರೋಪ ಮಾಡಿ, ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಸೀಟು ಗೆದ್ದು ಕಾಂಗ್ರೆಸ್ ಪಕ್ಷವನ್ನು ಶಾಶ್ವತ ವಿರೋಧ ಪಕ್ಷವನ್ನಾಗಿ ಮಾಡುತ್ತೇನೆ ಎಂದು ಗುಡುಗಿದರು.